ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ ,ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192-263462
ಫ್ಯಾಕ್ಸ್: 08192 - 260969
ಜನವರಿ - ಮಾರ್ಚ್ 2011

ತ್ರೈಮಾಸಿಕ ಪತ್ರಿಕೆ
(Quarterly News Letter)

ಮಿಂಚಂಚೆ: dvgtkvk@yahoo.com
ಸಂಪುಟ- 4, ಸಂಚಿಕೆ- 2

## ಸಿಂಚನಕ್ಕೆ ಮುನ್ನ

**ಪ್ರಿಯ ಬಂಧುಗಳೇ,**

ಹೊಸವರ್ಷ ಭರಪೂರ ಆರಂಭಗೊಂಡಿದೆ, ಚಟುವಟಿಕೆಗಳ ಪ್ರವಾಹವೇ ಕೃಷಿ ವಿಜ್ಞಾನ ಕೇಂದ್ರದಲ್ಲಿದೆ ಅಂದರೆ ತಪ್ಪಾಗಲಾರದು. ಈ ತ್ರೈಮಾಸಿಕ ಅವಧಿಯಲ್ಲಿ "ಹವಾಮಾನ ವೈಪರೀತ್ಯಕ್ಕೆ ಚೇತರಿಕೆಯುಕ್ತ ಕೃಷಿ ತಂತ್ರಜ್ಞಾನಗಳ ರಾಷ್ಟ್ರೀಯ ಆದ್ಯತಾ ಯೋಜನೆ" (NICRA) ಯನ್ನು ಅನುಷ್ಠಾನಗೊಳಿಸಲು ರೂಪರೇಷೆ ಸಿದ್ದಗೊಳಿಸುವ ಕಾರ್ಯ ನಡೆಯಿತು. ದಾವಣಗೆರೆ ತಾಲ್ಲೂಕಿನ ಸಿದ್ದನೂರು ಇದಕ್ಕಾಗಿ ಕಾರ್ಯಕ್ಷೇತ್ರವಾಗಿದೆ, ಇದರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ನಮ್ಮ ಇಡೀ ತಂಡ ಟೊಂಕ ಕಟ್ಟಿ ಸನ್ನದ್ದವಾಗಿದೆ.

ಈ ನಡುವೆ, ಬೆಂಗಳೂರು ನಗರದಲ್ಲಿ ತರಳಬಾಳು ಹುಣ್ಣಿಮೆ-2011 ವೈಭವಯುತವಾಗಿ ನೆರವೇರಿತು. ಇದರಲ್ಲಿ ಆಯೋಜಿಸಿದ್ದ ಕೃಷಿ ಮೇಳದಲ್ಲಿ ನಾವೆಲ್ಲರೂ ಸಕ್ರಿಯವಾಗಿ ಪಾಲ್ಗೊಂಡಿದ್ದೆವು. ಈ ಬಾರಿ "ರಾಷ್ಟ್ರೀಯ ವಿಜ್ಞಾನ ದಿನಾಚರಣೆ" ಬಹಳ ವಿಶೇಷವಾಗಿತ್ತು. ನಿವೃತ್ತ ಪ್ರಾಂಶುಪಾಲರಾದ ಶ್ರೀ ಲಿಂಗಪ್ಪನವರು ಅಧ್ಯಕ್ಷತೆವಹಿಸಿದ್ದು, "ಜಾನಪದದಲ್ಲಿ ವಿಜ್ಞಾನ" ಎಂಬ ವಿಚಾರವಾಗಿ ದಾವಣಗೆರೆಯ ಪ್ರೋ. ಎಂ. ಜಿ. ಈಶ್ವರಪ್ಪರವರು ಅರ್ಥಗರ್ಭಿತ, ಆಸಕ್ತಿಯುತ, ಸಂವಾದಭರಿತ ಉಪನ್ಯಾಸವನ್ನು ನೀಡಿದರು. ಪ್ರಪಂಚದ ಮೊತ್ತ ಮೊದಲ ಕೃಷಿ ವಿಜ್ಞಾನಿ ಮಹಿಳೆಯೇ ಎಂಬ ಅಂಶವನ್ನು ಭಾಗವಹಿಸಿದ್ದ 150 ರೈತ ಮಹಿಳೆಯರಿಗೆ ತಿಳಿಸಿದಾಗ ಚಪ್ಪಾಳೆಯ ಹರ್ಷೋದ್ಗಾರ ಕಿವಿಗಳನ್ನು ತುಂಬಿತ್ತು.

ಮಾರ್ಚ 8 ರಂದು 180 ಮಹಿಳೆಯರು ಭಾಗವಹಿಸಿದ್ದ ಕಾರ್ಯಕ್ರಮ "ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ" ಮತ್ತೊಂದು ವಿಶೇಷವಾಗಿತ್ತು. ಭಾಗವಹಿಸಿದ್ದ ಗ್ರಾಮೀಣ ಮಹಿಳೆಯರಿಗೆ, ಅವರ ಬಗ್ಗೆಯೇ ಒಂದು ದಿನ ವಿಶೇಷ ಆಚರಣೆ ವಿಶ್ವದಾದ್ಯಂತ ನಡೆಯುತ್ತಿದೆ ಎಂದು ತಿಳಿದು ತುಂಬಾ ಸಂತೋಷವಾಯಿತು. ಇದೇ ಮಾರ್ಚ್ 22 ಮತ್ತು 23 ರಂದು 'ವಿಶ್ವಜಲ ದಿನ' ಮತ್ತು 'ವಿಶ್ವ ಹವಾಮಾನ ದಿನ'ಗಳನ್ನು ಅನುಕ್ರಮವಾಗಿ ಕೇಂದ್ರದಲ್ಲಿ ಸರಳವಾಗಿ ಆಚರಿಸಿ, ಭಾಗವಹಿಸಿದ್ದ ರೈತ ಬಂಧುಗಳೊಂದಿಗೆ ನೀರು ಮತ್ತು ಪರಿಸರದ ಪ್ರಾಮುಖ್ಯತೆಗಳನ್ನು ಕೆವಿಕೆಯ ತಜ್ಞರುಗಳು ಹಂಚಿಕೊಂಡರು.

ಕಳಶಪ್ರಾಯವಾಗಿ ಮಾರ್ಚ 26 ರಂದು, ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಆಶ್ರಯದಲ್ಲಿ ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ, ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಅಧ್ಯಕ್ಷತೆಯಲ್ಲಿ **"ರೈತ ಸಿರಿ ಹಬ್ಬ"** ವನ್ನು ಕೆವಿಕೆಯು, ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ, ಕೃಷಿ ಇಲಾಖೆ (ದಾವಣಗೆರೆ ಮತ್ತು ಚಿತ್ರದುರ್ಗ), ಸಾವಯವ ಕೃಷಿ ಮಿಷನ್ ಪರಿವಾರಗಳು (ದಾವಣಗೆರೆ, ಚಿತ್ರದುರ್ಗ) ಗಳ ಸಹಯೋಗದಲ್ಲಿ ನಡೆಸಿದ್ದು.... 3500 ಕ್ಕೂ ಮೀರಿ ರೈತರು ಭಾಗವಹಿಸಿ, ಸಾವಯವ ಸಂವಾದ ವಿಷಯವಾದ "ಸಾವಯವ ಕೃಷಿಯ ಪ್ರಾಮುಖ್ಯತೆ ಮತ್ತು ಅನಿವಾರ್ಯತೆ" ಇದರಲ್ಲಿ ಸಕ್ರೀಯವಾಗಿ ಪಾಲ್ಗೊಂಡಿದ್ದು ನಮ್ಮ ಶ್ರಮಕ್ಕೆ ಸಂದ ಜಯವಾಗಿತ್ತು. ಸನ್ಮಾನ್ಯ ಶ್ರೀ ಉಮೇಶ ಕತ್ತಿಯವರು, ಕೃಷಿ ಸಚಿವರು ಮತ್ತು ಸನ್ಮಾನ್ಯ ಶ್ರೀ ರವೀಂದ್ರನಾಥ್ ಎಸ್.ಎ., ತೋಟಗಾರಿಕೆ ಮತ್ತು ಸಕ್ಕರೆ ಸಚಿವರು, ಕರ್ನಾಟಕ ಸರ್ಕಾರ, ಇವರುಗಳು ರೈತರೊಂದಿಗೆ ಸಂವಾದ ನಡೆಸಿದ್ದು ತುಂಬಾ ವಿಶೇಷವಾಗಿತ್ತು. ಅದೇ ದಿನ, ಮಧ್ಯಾಹ್ನದ ಕಾರ್ಯಕ್ರಮದಲ್ಲಿ ಎಂಡೋಸಲ್ಫಾನ್ ಕೀಟನಾಶಕದ ಬಳಕೆಯ ದುಷ್ಪರಿಣಾಮಗಳನ್ನು ವಿವರಿಸಿ ಉಪನ್ಯಾಸವನ್ನು ಡಾ. ರವೀಂದ್ರನಾಥ್ ಶ್ಯಾನಭಾಗ್ ನೀಡಿದರು. ನಾಡೋಜ ಶ್ರೀ ಡಾ. ನಾರಾಯಣ ರೆಡ್ಡಿಯವರು, ಶ್ರೀ ರಾಘವರು ಮತ್ತು ಶ್ರೀ ಕೃಷ್ಣರಾಜು, ಇವರುಗಳು ಸಾವಯವ, ಸಹಜಕೃಷಿ ಮತ್ತು ಗೋವಿನ ಪ್ರಾಮುಖ್ಯತೆ ವಿವರಿಸುವ ಉಪನ್ಯಾಸಗಳನ್ನು ನೀಡಿ ರೈತರನ್ನು ಸಾವಯವ ಕೃಷಿಗೆ ಉತ್ತೇಜಿಸಿದರು.

ಪೂಜ್ಯರೀರ್ವರಿಗೂ ನಡೆದ ಕಾರ್ಯಕ್ರಮ ತೃಪ್ತಿ ಕೊಟ್ಟಿತೆಂದು ತಿಳಿದು ನಮ್ಮ ತಂಡಕ್ಕೆ ಹುರುಪಿನ ಅಕ್ಷಯ ಪಾತ್ರೆ ಕೈಗೆ ಸಿಕ್ಕಂತಾಗಿತ್ತು. ಜೊತೆಗೆ ನಿಮ್ಮೆಲ್ಲರ ಪ್ರೀತಿಯ ಆರೈಕೆಗಳೊಂದಿಗೆ 2011 ವರ್ಷ ಬಹಳ ವಿಶೇಷವಾಗಲಿದೆಯೆಂದು ನಮ್ಮ ನಂಬಿಕೆ.

ವಿಶ್ವಾಸದೊಂದಿಗೆ,
**-ಡಾ. ದೇವರಾಜ ಟಿ.ಎನ್.**

### ಹಮ್ಮಿಕೊಂಡ ಪ್ರಾಯೋಜಿತ ತರಬೇತಿ ಕಾರ್ಯಕ್ರಮಗಳು:

**ರಾಜ್ಯದ 4 ಕೆ.ವಿ.ಕೆಗಳಲ್ಲಿ (ದೇಶದ 100 ಕೆ.ವಿ.ಕೆಗಳಲ್ಲಿ) ನಮ್ಮ ತರಳಬಾಳು ಕೃಷಿ ವಿಜ್ಞಾನ ಕೇಂದ್ರವನ್ನು NICRA (National Initiative on Climate Resilient Agriculture) ಯೋಜನಾ ಅನುಷ್ಠಾನಕ್ಕಾಗಿ ICAR ಆಯ್ಕೆ ಮಾಡಿದೆ. ಪ್ರಸ್ತುತ ಯೋಜನೆಯನ್ನು ದಾವಣಗೆರೆ ತಾ. ಸಿದ್ದನೂರು ಗ್ರಾಮದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿಯಲ್ಲಿ ಕಾರ್ಯಕ್ರಮಗಳು ಆರಂಭವಾಗಿವೆ.**



ಪರಮಪೂಜ್ಯ ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಜಿಯವರಿಂದ "ರೈತ ಸಿರಿ" ಹಬ್ಬಕ್ಕೆ ಚಾಲನೆ



ಸಿರಿ ಹಬ್ಬದಲ್ಲಿ ನೆರೆದಿರುವ ಅಪಾರ ಜನಸ್ತೋಮ



ಸಾವಯವ ವಸ್ತು ಪ್ರದರ್ಶನ ಮಳಿಗೆಗಳಿಗೆ ರೈತರ ಬೇಟಿ

ಸಿರಿಗೆರೆಯಲ್ಲಿ ನಡೆದ 'ರೈತ ಸಿರಿ ಹಬ್ಬ' ದಲ್ಲಿ ಪರಮ ಪೂಜ್ಯ ಜಗದ್ಗುರುಗಳವರು ನೆರೆದ ಸಮಸ್ತ ರೈತ ಬಾಂಧವರಿಗೆ ಗ್ರಾಮದಲ್ಲಿ ಆಹಾರ ಬೆಳೆಗಳ ಸಂಸ್ಕರಣೆಯನ್ನು ರಸ್ತೆಯಲ್ಲಿ ಮಾಡದೇ ಸುಸಜ್ಜಿತ ಕಣಗಳಲ್ಲಿ ಮಾಡಬೇಕು ಎಂದು ಹೇಳಿದರು. ಪ್ರತಿ ಗ್ರಾಮ ಪಂಚಾಯತ್‌ಗೆ ಒಂದು ಸಾಮೂಹಿಕ ಕಣವನ್ನು ಮಾಡಬೇಕು ಅದರಲ್ಲಿ ನಾವು ಒಕ್ಕಣೆ ಮಾಡಿದರೆ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಸಾಧ್ಯವೆಂದರು. ತರಳಬಾಳು ಕೃಷಿ ವಿಜ್ಞಾನ ಕೇಂದ್ರವು ಸಾಮಾಜಿಕ ಕಣ ನಿರ್ಮಾಣ ಯೋಜನೆಗೆ ಕೃಷಿ ಇಲಾಖೆಗೆ ಹಾಗೂ ರೈತರಿಗೂ ಮಧ್ಯಸ್ತಿಕೆವಹಿಸಲಿದ್ದು ಆಸಕ್ತರು ಕೇಂದ್ರವನ್ನು ಸಂಪರ್ಕಿಸಿ ಅರ್ಜಿಯನ್ನು ನೀಡಬಹುದೆಂದರು.

ಪ್ರಸ್ತುತ ಕಾರ್ಯಕ್ರಮದಲ್ಲಿ ನಾವು ಕೇಳಿದ ಪ್ರಶ್ನೆಗೆ ಉತ್ತರಿಸಿದ ಕೃಷಿ ಸಚಿವರಾದ ಶ್ರೀ ಉಮೇಶ ವಿ. ಕತ್ತಿಯವರು, ಪಠ್ಯ ಪುಸ್ತಕಗಳಲ್ಲಿ ಸಾವಯವ ಕೃಷಿಯನ್ನು ಕುರಿತು ಪಾಠ, ಸಾವಯವ ಕೃಷಿ ಸಾಧಕರ ಪರಿಚಯವನ್ನು ಮುಂದಿನ ದಿನಗಳಲ್ಲಿ ಅಳವಡಿಸಲಾಗುವುದೆಂದರು. ಇದೇ ಸಂದರ್ಭದಲ್ಲಿ ಏರ್ಪಡಿಸಿದ್ದ "ಸಾವಯವ ವಸ್ತು ಪ್ರದರ್ಶನ ಮತ್ತು ಮಾರಾಟ" ಎಲ್ಲರ ಗಮನಸೆಳೆದವು. ಸಾವಯವ ಪರಿಕರಗಳು, ಉತ್ಪನ್ನಗಳು, ಸಾವಯವ ಕೃಷಿ ಕುರಿತು ಪುಸ್ತಕಗಳು, ಸಿ.ಡಿ.ಗಳು, ಯಂತ್ರೋಪಕರಣಗಳು ಇನ್ನೂ ಮುಂತಾದವುಗಳನ್ನು ವಸ್ತುಪ್ರದರ್ಶನದಲ್ಲಿ ಇಡಲಾಗಿತ್ತು.

**ಕೇಂದ್ರದ ತಜ್ಞರುಗಳು ಭಾಗವಹಿಸಿರುವ ಕಾರ್ಯಗಾರಗಳು / ವಿಚಾರ ಸಂಕಿರಣಗಳು:**

| ದಿನಾಂಕ | ವಿಷಯ | ಸ್ಥಳ | ಭಾಗವಹಿಸಿದ ತಜ್ಞರು |
|---|---|---|---|
| 17-18, ಜನವರಿ 2011 | ಜೈವಿಕ ಇಂಧನ | ಎಂ.ಜಿ.ಡಿ.ಆರ್.ಇ.ಡಿ., ಬೆಂಗಳೂರು | ಶ್ರೀ ಪ್ರಸನ್ನಕುಮಾರ ಎನ್. |
| ಜೂನ್ 19, 2011 | ನಿಕ್ರಾ ಪೂರ್ವ ತಯಾರಿ | ZPD, ವಲಯ ಯೋಜನಾ ನಿರ್ದೇಶನಾಲಯ, ಬೆಂಗಳೂರು | ಡಾ. ದೇವರಾಜ ಟಿ.ಎನ್.<br>ಡಾ. ಜಯದೇವಪ್ಪ ಜಿ.ಕೆ. |
| 22-02-2011 | ZREP ಕಾರ್ಯಾಗಾರ | ಕೃಷಿ ಮಹಾವಿದ್ಯಾನಿಲಯ, ಶಿವಮೊಗ್ಗ | ಡಾ. ದೇವರಾಜ ಟಿ.ಎನ್.<br>ಶ್ರೀ ಮಲ್ಲಿಕಾರ್ಜುನ ಬಿ.ಓ |
| 04-02-2011 | NICRA ಯೋಜನೆಯ ಕುರಿತು | ಕೃಷಿ ವಿಜ್ಞಾನ ಕೇಂದ್ರ, ಅಹಮದ್ ನಗರ, ಮಹಾರಾಷ್ಟ್ರ | ಡಾ. ದೇವರಾಜ ಟಿ.ಎನ್. |
| 09-02-2011 | NICRA ಯೋಜನೆಯ ಕ್ರಿಯಾಯೋಜನೆ ಮಂಡನೆ | ವಲಯ ಯೋಜನಾ ನಿರ್ದೇಶನಾಲಯ, ಬೆಂಗಳೂರು | ಡಾ. ದೇವರಾಜ ಟಿ.ಎನ್<br>ಶ್ರೀ ಮಲ್ಲಿಕಾರ್ಜುನ ಬಿ.ಓ<br>ಡಾ. ಜಯದೇವಪ್ಪ ಜಿ.ಕೆ |
| 11-12 ಫೆಬ್ರವರಿ 2011 | ಕೃಷಿ ವಿಜ್ಞಾನ ಕೇಂದ್ರದ ಕ್ರಿಯಾ ಯೋಜನೆಯ ಪೂರ್ವಭಾವಿ ಸಭೆ | ವಿಸ್ತರಣಾ ನಿರ್ದೇಶಕರ ಕಛೇರಿ, ಬೆಂಗಳೂರು | ಡಾ. ದೇವರಾಜ ಟಿ.ಎನ್.<br>ಶ್ರಿ ರಘುರಾಜ ಜೆ.<br>ಡಾ. ಪ್ರದೀಪ್ ಹೆಚ್. ಎಂ |
| 18-19 ಫೆಬ್ರವರಿ 2011 | ಕೃಷಿ ವಿಜ್ಞಾನ ಕೇಂದ್ರದ ಕ್ರಿಯಾ ಯೋಜನೆಯ ಅಂತಿಮ ವರದಿ | ವಲಯ ಯೋಜನಾ ನಿರ್ದೇಶನಾಲಯ, ಬೆಂಗಳೂರು | ಡಾ. ದೇವರಾಜ ಟಿ.ಎನ್.<br>ಶ್ರೀ ಮಲ್ಲಿಕಾರ್ಜುನ ಬಿ.ಓ. |

**ಆಕಾಶವಾಣಿ ಭದ್ರಾವತಿ / ಚಿತ್ರದುರ್ಗದಲ್ಲಿ ಬಿತ್ತನೆಗೊಂಡ ಕಾರ್ಯಕ್ರಮಗಳು:**

| ದಿನಾಂಕ | ಶೀರ್ಷಿಕೆ | ತಜ್ಞರ ಹೆಸರು |
|---|---|---|
| 10-01-2011 | ಮೀನು ಕೃಷಿಯಲ್ಲಿ ಆಹಾರ ಬಳಕೆ ವಿಧಾನಗಳು | ಡಾ. ದೇವರಾಜ ಟಿ.ಎನ್. |
| 11-01-2011 | ಬೇಸಿಗೆ ಮೆಕ್ಕೆಜೋಳ ಬೆಳೆಯಲ್ಲಿ ಆಧುನಿಕ ಬೇಸಾಯಕ್ರಮಗಳು ಮತ್ತು ಮೌಲ್ಯವರ್ಧಿತ ಪದಾರ್ಥಗಳ ತಯಾರಿಕೆ | ಶ್ರೀ ಮಲ್ಲಿಕಾರ್ಜುನ ಬಿ.ಓ. |
| 11-01-2011 | ಭತ್ತದಲ್ಲಿ ರೋಗ ಮತ್ತು ಕೀಟಗಳ ಸಮಗ್ರ ನಿರ್ವಹಣೆ | ಶ್ರೀ ಪ್ರಸನ್ನಕುಮಾರ ಎನ್. |

## ಕೇಂದ್ರದಲ್ಲಿ ಆಚರಿಸಿದ ವಿಶೇಷ ದಿನಗಳು:



**28-02-2011: ರಾಷ್ಟ್ರೀಯ ವಿಜ್ಞಾನ ದಿನಾಚರಣೆ**

08-03-2011: ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ

22-03-2011: ವಿಶ್ವ ಜಲ ದಿನಾಚರಣೆ

23-03-2011: ವಿಶ್ವ ಹವಾಮಾನ ದಿನಾಚರಣೆ



| ಶೀರ್ಷಿಕೆ | ದಿನಾಂಕ | ರೈತರ ಸಂಖ್ಯೆ |
|---|---|---|
| ಸಮಗ್ರ ಹೈನುಗಾರಿಕೆ ಮತ್ತು ಎರೆಗೊಬ್ಬರ ತಯಾರಿಕೆ ಪರಿಣಿತ ತರಬೇತಿ | 28-02-2011 ರಿಂದ 05-03-2011<br>07-03-2011 ರಿಂದ 12-03-2011<br>21-03-2011 ರಿಂದ 26-03-2011 | 437 |

ಎಸ್. ಜಿ. ಎಸ್. ವೈ. ಯೋಜನೆಯಡಿ ಜಿಲ್ಲಾ ಪಂಚಾಯತ್, ದಾವಣಗೆರೆ ಪ್ರಾಯೋಜಿತ ತರಬೇತಿ ಕಾರ್ಯಕ್ರಮ (ಡಾ. ಜಯದೇವಪ್ಪ ಜಿ.ಕೆ., ನೋಡಲ್ ಅಧಿಕಾರಿ)

## ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ಮಾರಾಟಕ್ಕೆ ದೊರೆಯುವ ತಾಂತ್ರಿಕ ಒಳಸುರಿಗಳು ಮತ್ತು ಇತರೆ ಸಾಮಗ್ರಿಗಳು:

| ಕ್ರ.ಸಂ. | ವಿವಿರಗಳು | ಮೊತ್ತ |
|---|---|---|
| 01 | ಬಾಳೆ ಸ್ಪೆಷಲ್ | ರೂ. 130-00/ ಕೆ.ಜಿ. |
| 02 | ತರಕಾರಿ ಸ್ಪೆಷಲ್ | ರೂ. 130-00/ಕೆ.ಜಿ. |
| 03 | ಮಾವು ಸ್ಪೆಷಲ್ | ರೂ. 200-00/ ಕೆ.ಜಿ. |
| 04 | ಟ್ರೈಕೋಡರ್ಮಾ | ರೂ. 50-00/ ಕೆ.ಜಿ. |
| 05 | ತರಳಬಾಳು ನರ್ಸರಿ | |
| | 1. ಮಾವು (ಬಾದಾಮಿ) | ರೂ. 30-00 / ಗಿಡಕ್ಕೆ |
| | 2. ನಿಂಬೆ (ಸ್ಥಳೀಯ) | ರೂ. 10-00 / ಗಿಡಕ್ಕೆ |
| | 3. ಕರಿಬೇವು (ಸ್ಥಳೀಯ) | ರೂ. 10-00 / ಗಿಡಕ್ಕೆ |
| | 4. ನುಗ್ಗೆ (ಪಿ.ಕೆ.ಎಂ.) | ರೂ. 10-00 / ಗಿಡಕ್ಕೆ |
| | 5. ಅಲಂಕಾರಿಕ ಗಿಡಗಳು | ರೂ. 10-00 / ಗಿಡಕ್ಕೆ |
| | 6. ಔಷಧಿ ಗಿಡಗಳು (ಅಮೃತಬಳ್ಳಿ, ತುಳಸಿ, ದೊಡ್ಡಪತ್ರೆ, ನಿತ್ಯಪುಷ್ಪ, ಮಜ್ಜಿಗೆ ಹುಲ್ಲು, ಲಾವಂಚ | ರೂ. 10-00 / ಗಿಡಕ್ಕೆ |
| 06 | ಎರೆಹುಳು ಗೊಬ್ಬರ | ರೂ. 5.00 / ಕೆ.ಜಿ. |
| 07 | ಎರೆಹುಳುಗಳು | ರೂ. 200-00/ ಕೆ.ಜಿ. |
| 08 | ಅಲಂಕಾರಿಕ ಮೀನುಗಳು | ರೂ. 5.00 / ಜೋಡಿಗೆ |
| 09 | ವಿಸ್ತರಣಾ ಹಸ್ತ ಪ್ರತಿಗಳು | ರೂ. 5.00 / ಪ್ರತಿಗೆ |
| 10 | ಅಝೋಲ್ಲಾ | ರೂ. 20-00 / ಕೆ.ಜಿ |
| 11. | ಮೇವಿನ ಕಡ್ಡಿಗಳು | ರೂ. 0.30 / ಕಡ್ಡಿಗೆ |

## CBTMPCS ಯೋಜನೆಯಡಿ, ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು ಪ್ರಾಯೋಜಿತ ತರಬೇತಿ ಕಾರ್ಯಕ್ರಮಗಳು

(ಶ್ರೀ ಮಲ್ಲಿಕಾರ್ಜುನ ಬಿ.ಓ., ನೋಡಲ್ ಅಧಿಕಾರಿ)




| ಕ್ರಸಂ | ಶೀರ್ಷಿಕೆ | ದಿನಾಂಕ | ರೈತರ ಸಂಖ್ಯೆ |
|---|---|---|---|
| 01 | ರೈತ ಮತ್ತು ರೈತ ಮಹಿಳೆಯರಿಗೆ ಕೃಷಿ ತಂತ್ರಜ್ಞಾನಗಳ ಬಗ್ಗೆ | 04-01-2011 ರಿಂದ 06-01-2011<br>18-01-2011ರಿಂದ 20-01-2011 | 60 |
| 02 | ನೀರಗಂಟಿಗಳಿಗೆ ನೀರು ನಿರ್ವಹಣೆ ಬಗ್ಗೆ ತರಬೇತಿ | 11-01-2011 ರಿಂದ 13-01-2011<br>21-02-2011 ರಿಂದ 23-02-2011<br>24-02-2011 ರಿಂದ 26-02-2011 | 90 |
| 03 | ಪರಿಸರ ನಿರ್ವಹಣೆ | 27-01-2011 ರಿಂದ 28-01-2011 | 30 |

## ಕೇಂದ್ರದ ತಜ್ಞರು ನೀಡಿರುವ ಉಪನ್ಯಾಸಗಳು:

| ದಿನಾಂಕ | ವಿಷಯ | ಸಂಪನ್ಮೂಲ ವ್ಯಕ್ತಿ |
|---|---|---|
| 11-01-2011 | ಮಕ್ಕಳಲ್ಲಿ ಶಿಕ್ಷಣದ ಮಹತ್ವ (ಜಗಳೂರು) | ಡಾ. ದೇವರಾಜ ಟಿ.ಎನ್. |
| 22-01-2011 | ಶೇಂಗಾ ಬೆಳೆಯಲ್ಲಿ ಸಮಗ್ರ ಪೀಡೆ ನಿರ್ವಹಣೆ (ಕಾಡಜ್ಜಿ) | ಶ್ರೀ ಪ್ರಸನ್ನಕುಮಾರ ಎನ್. |
| 02-02-2011 | ಲಿಂಗತ್ವ ಸಮಾನತೆಯಲ್ಲಿ ಕೃಷಿ ವಿಜ್ಞಾನ ಕೇಂದ್ರದ ಪಾತ್ರ (ದಾವಣಗೆರೆ) | ಶ್ರೀ ರಘುರಾಜ ಜೆ. |
| 17-03-2011 | ಸಾವಯುವ ಕೃಷಿ (ಬಿಳ್ಚೋಡು) | ಡಾ. ದೇವರಾಜ ಟಿ.ಎನ್. |
| 23-03-2011 | Communication Skills and use of Audio, Visual aids for different section in communication (Davanagere) | ಶ್ರೀ ಮಲ್ಲಿಕಾರ್ಜುನ ಬಿ.ಓ. |
| 07-02-2011<br>10-02-2011<br>29-03-2011 | ಪೌಷ್ಠಿಕ ಕೈತೋಟ (ಹರಪನಹಳ್ಳಿ, ಜಗಳೂರು, ಚನ್ನಗಿರಿ) | ಶ್ರೀ ಬಸವನಗೌಡ ಎಂ. ಜಿ. |





ದಿನಾಂಕ : 14-01-2011 ರಂದು ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಶಿಕ್ಷಣ ಮತ್ತು ತರಭೇತಿ ಸಂಸ್ಥೆ, ದಾವಣಗೆರೆ ಹಾಗೂ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಆಯ್ದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ' **ಶಾಲಾ ಕೈತೋಟ ಸಬಲೀಕರಣ** ' ವಿಷಯದಲ್ಲಿ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

## ಕೃಷಿ ಮುನ್ಸೂಚನೆಗಳು: (ಏಪ್ರಿಲ್–ಜೂನ್)

### ಮೀನು ಕೃಷಿ:

- ಮೀನು ಕೃಷಿಯಲ್ಲಿ ಆಸಕ್ತಿ ಇರುವ ರೈತರು, ಹೊಂಡಗಳಿಂದ ಅನಗತ್ಯ ಸಸ್ಯ- ಕಳೆ ಮೀನುಗಳನ್ನು ನಿರ್ಮೂಲನೆ ಮಾಡಬೇಕು. ಮಳೆನೀರು ಹೊಂಡಕ್ಕೆ ಬರುವಂತಿದ್ದರೆ, ಕಸಕಡ್ಡಿಗಳನ್ನು ತಡೆಯುವ ಜಾಲರಿ ಹಾಕಬೇಕು.
- ಜೂನ್ ತಿಂಗಳಲ್ಲಿ ಮೀನುಮರಿಗಳು ದಾಸ್ತಾನಿಗೆ ದೊರೆಯುತ್ತವೆ. ಹೀಗಿರುವಾಗ, 15 ದಿವಸ ಮುನ್ನ ಎಕರೆಗೆ 3–4 ಕ್ವಿಂಟಾಲ್ ದನದ ಸಗಣಿ / 1–2 ಕ್ವಿಂಟಾಲ್‌ನಷ್ಟು ಕೋಳಿ ಗೊಬ್ಬರ ಹಾಕಿ, 4–6 ಅಡಿ ಆಳದ ನೀರನ್ನು ಫಲವತ್ತೀಕರಿಸಬೇಕು.
- ಗೆಂಡೆ ಮೀನುಗಳನ್ನು (2–3 ಜಾತಿ) 4:4:2 ರ ಅನುಪಾತದಲ್ಲಿ (ಕಾಟ್ಲಾ: ರೋಹು: ಸಾಮಾನ್ಯ ಗೆಂಡೆ) ಎಕರೆಗೆ 5000–6000 ಬೆರಳುದ್ದ ಮೀನು ಮರಿಗಳನ್ನು ದಾಸ್ತಾನು ಮಾಡಬಹುದು.
- ಪ್ರಾರಂಭದ ಒಂದು ತಿಂಗಳು, ಮೀನುಮರಿಗಳಿಗೆ ಅಕ್ಕಿ ತೌಡು: ಶೇಂಗಾ ಹಿಂಡಿಯನ್ನು (1:1) ವಿಟಮಿನ್ ಖನಿಜಾಂಶಗಳ ಮಿಶ್ರಣ (1%) ರೊಂದಿಗೆ ಊಟವಾಗಿ ನೀಡಬೇಕು. (ಎಕರೆಗೆ 3–5 ಕೆ.ಜಿ./ ದಿನಕ್ಕೆ).

### ಮಣ್ಣು ಮತ್ತು ನೀರು ಸಂರಕ್ಷಣೆ

- ಹೊಲಗಳಲ್ಲಿ ಮಣ್ಣು ಮಾದರಿ ಸಂಗ್ರಹಿಸಿ, ಪರೀಕ್ಷೆಗೆ ಕಳುಹಿಸಲು ಸಕಾಲವಾಗಿದ್ದು, ರೈತರು ತಮ್ಮ ಹೊಲಗಳ ಮಣ್ಣನ್ನು ಸೂಕ್ತ ಪದ್ಧತಿ ಅನುಸರಿಸಿ ಸಂಗ್ರಹಿಸಿ, ಪರೀಕ್ಷೆಗೆ ಒಳಪಡಿಸುವುದು.

### ಬೇಸಾಯ ಶಾಸ್ತ್ರ

- **ಮೌಲ್ಯವರ್ಧಿತ ಕೊಟ್ಟಿಗೆ ಗೊಬ್ಬರ ಬಳಕೆ:** 1 ಟನ್ ಕೊಟ್ಟಿಗೆ ಗೊಬ್ಬರ + 1 ಕೆ.ಜಿ. ಟ್ರೈಕೋಡರ್ಮಾ ಮಿಶ್ರಮಾಡಿ 15 ದಿನಗಳ ನಂತರ ಒಂದು ಎಕರೆಗೆ ಬಳಸಬಹುದು.
- ಮಣ್ಣಿನ ಫಲವತ್ತತೆಯನ್ನು ಕಾಪಾಡಲು ಭತ್ತ ಕಟಾವಾದ ನಂತರ ಎಕರೆಗೆ 25 ಕೆ.ಜಿ. ಹಸಿರೆಲೆಗೊಬ್ಬರ (ಡಯಾಂಚವನ್ನು) ಬಿತ್ತುವುದು, ಡಯಾಂಚ ಬೆಳೆಯು ಹೂವಾಗುವುದಕ್ಕೂ ಮುಂಚೆಯೇ (45 ದಿನದೊಳಗೆ) ಭೂಮಿಗೆ ಸೇರಿಸುವುದು.
- ತೊಗರಿಯನ್ನು ಬಿತ್ತನೆ ಮಾಡುವುದಾದರೆ ಮೇ ಕೊನೆಯ ವಾರದಲ್ಲಿ ಹೆಚ್. ವೈ- 3 ಸಿ ಬಳಕೆ ಮಾಡಿ, ಮಳೆ ತಡವಾಗಿ ಬಂದರೆ ಜೂನ್–ಜುಲೈ ಕೊನೆಯವರೆಗೂ ಬಿ. ಆರ್.ಜಿ–1 /2 ಬಿತ್ತನೆ ಮಾಡಬಹುದು.
- ಮೆಕ್ಕೆಜೋಳವನ್ನು ಏಕಬೆಳೆಯಾಗಿ ಬೆಳೆಯದೆ ದ್ವಿದಳ ಧಾನ್ಯಗಳ ಜೊತೆ ಮಿಶ್ರ ಬೆಳೆಯಾಗಿ ಮಾಡಿ (ಮೆಕ್ಕೆಜೋಳ 8 + ತೊಗರಿ 1, ಬಿ.ಆರ್.ಜಿ. 1/2).
- ಮೆಕ್ಕೆಜೋಳದಲ್ಲಿ ನವೀನ ಹೈಬ್ರಿಡ್ ತಳಿಗಳಾದ ಎನ್. ಎ. ಹೆಚ್ 1137/ಎನ್. ಎ. ಹೆಚ್– 2049 ಬಳಸಿ ಅಧಿಕ ಇಳುವರಿ ಪಡೆಯಿರಿ. ಈ ತಳಿಗಳು ಕಾಂಡ ಕೊರಕ, ಕೇದಿಗೆ ರೋಗ ಮತ್ತು ಎಲೆ ಅಂಗಮಾರಿ ರೋಗಗಳಿಗೆ ನಿರೋಧಕತೆಯನ್ನು ಹೊಂದಿರುತ್ತವೆ.

### ಸಸ್ಯ ಸಂರಕ್ಷಣೆ

- ಅಡಿಕೆ:

**ಹೂ ಗೊಂಚಲು ಒಣಗುವ ಮತ್ತು ಎಳೆಕಾಯಿ ಉದುರುವ ರೋಗ**

**ಲಕ್ಷಣ:** ಹೂಗೊಂಚಲುಗಳು ತುದಿಯಿಂದ ಬುಡದ ಕಡೆಗೆ ಹಳದಿಯಾಗಿ ನಂತರ ಕಂದು ಬಣ್ಣಕ್ಕೆ ತಿರುಗುತ್ತದೆ. ಎಳೆಕಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉದುರುತ್ತವೆ.

**ಹತೋಟಿ:** ರೋಗಕ್ಕೆ ತುತ್ತಾಗಿ ಒಣಗಿದ ಹಿಂಗಾರುಗಳನ್ನು ನಾಶ ಮಾಡಬೇಕು. ಮ್ಯಾಂಕೋಜೆಬ್‌ನ್ನು (3 ಗ್ರಾಂ / ಲೀ ನೀರು) ಹೂಗೊಂಚಲು ಅರಳುವ ಸಮಯದಲ್ಲಿ ಮತ್ತು 20–25 ದಿನಗಳ ನಂತರ ಸಿಂಪಡಿಸಬೇಕು.

**ಕೊಳೆ ರೋಗ**

**ಲಕ್ಷಣ:** ಎಳೆಕಾಯಿಗಳ ತೊಟ್ಟಿನ ಭಾಗದಲ್ಲಿ ನೀರಿನಿಂದ ತೊಯ್ದ ಕಲೆಗಳು ಉಂಟಾಗುತ್ತದೆ. ಕಾಯಿಗಳ ಮೇಲೆ ಬೂದು ಮಿಶ್ರಿತ ಕಂದು ಬಣ್ಣದ ಬೂಸ್ಟಿನ ಬೆಳವಣಿಗೆ ಕಾಣುತ್ತದೆ. ಕಾಯಿಗಳು ಕೊಳೆತು ಹೆಚ್ಚಿನ ಸಂಖ್ಯೆಯಲ್ಲಿ ಉದುರುತ್ತದೆ.

**ಹತೋಟಿ:** ರೋಗಕ್ಕೆ ತುತ್ತಾದ ಕಾಯಿಗಳನ್ನು ನಾಶಪಡಿಸಬೇಕು, ಮುಂಗಾರು ಪ್ರಾರಂಭಕ್ಕೆ ಮೊದಲು ಶೇ. 1 ರ ಬೋರ್ಡೋ ದ್ರಾವಣ ಅಥವಾ ತಾಮ್ರದ ಆಕ್ಸಿಕ್ಲೋರೈಡ್ ( 3 ಗ್ರಾಂ. / ಲೀ. ) ಸಿಂಪಡಿಸಬೇಕು.

**ಪಪ್ಪಾಯ**

**ಹಿಟ್ಟು ತಿಗಣೆ :** ಎಲೆ ಮತ್ತು ಕಾಂಡದ ಮೇಲೆ ಬಿಳಿ ಬಣ್ಣದ ಹಿಟ್ಟು ತಿಗಣೆಗಳು ರಸವನ್ನು ಹೀರುತ್ತವೆ.

**ಹತೋಟಿ:** ಪರೋಪ ಜೀವಿ ಅಸಿರೋಫ್ಯಾಗಸ್ ಪಪ್ಪಾಯವನ್ನು ಪ್ರತಿ ಗಿಡಕ್ಕೆ 10 ರಂತೆ ಬಿಡಬೇಕು.

**ಶೀತಲೀಕರಣ ವ್ಯವಸ್ಥೆಯ ಕೊರತೆಯಿಂದಾಗಿ ದೇಶದಲ್ಲಿ ಪ್ರತಿವರ್ಷ 5–9 ಕೋಟಿ ಟನ್‌ನಷ್ಟು ಹಣ್ಣು ಹಾಗೂ ತರಕಾರಿಗಳು ಹಾಳಾಗುತ್ತಿವೆ. ನಮ್ಮ ದೇಶದಲ್ಲಿ ಪ್ರತಿವರ್ಷ 68 ಕೋಟಿ ಟನ್ ಹಣ್ಣು ಮತ್ತು 12.9 ಕೋಟಿ ಟನ್ ನಷ್ಟುಗಳಷ್ಟು ತರಕಾರಿ ಬೆಳೆಯಲಾಗುತ್ತಿದೆ. ವಿಶ್ವದಲ್ಲಿ ಎರಡನೇ ಅತೀ ದೊಡ್ಡ ಹಣ್ಣು ಮತ್ತು ತರಕಾರಿ ಉತ್ಪಾದಿಸುವ ರಾಷ್ಟ್ರ ನಮ್ಮದು. ಆದರೆ, ಉತ್ಪಾದನೆಯಾಗುತ್ತಿರುವ ಹಣ್ಣು ಹಾಗೂ ತರಕಾರಿಗಳ ಪೈಕಿ ಶೇ. 20 ರಷ್ಟು ಹಾಳಾಗಿ ಹೋಗುತ್ತದೆ. ಅಲ್ಲದೇ ದೇಶದಲ್ಲಿ ಉತ್ಪಾದನೆಯಾಗುತ್ತಿರುವ ತೋಟಗಾರಿಕೆ ಬೆಳೆಗಳ ಪೈಕಿ ಶೇ. 2 ರಷ್ಟನ್ನು ಮಾತ್ರ ಸಂಸ್ಕರಿಸಲಾಗುತ್ತಿದ್ದು, ಈ ಪ್ರಮಾಣ ಚೀನಾ ಮತ್ತಿತರ ಏಷ್ಯಾ ಫೆಸಿಫಿಕ್ ವಲಯದ ರಾಷ್ಟ್ರಗಳಿಗಿಂತ ಕಡಿಮೆ. ದೇಶದಲ್ಲಿ ಒಟ್ಟಾರೆ 5400 ಶೀತಲೀಕರಣ ಘಟಕಗಳಿವೆ. ಅವುಗಳಲ್ಲಿ 4875 ಖಾಸಗಿ ವಲಯದ್ದು, 125 ಘಟಕಗಳು ಮಾತ್ರ ಸಾರ್ವಜನಿಕ ಸ್ವಾಮ್ಯದ್ದು. ಈ ಪೈಕಿ ಶೇ. 50 ರಷ್ಟು ಘಟಕಗಳು ದೇಶದ ಉತ್ತರ ಭಾಗದಲ್ಲಿವೆ. ಆದರೆ ಕರ್ನಾಟಕದಲ್ಲಿರುವುದು ಕೇವಲ 79 ಹಣ್ಣು ಮತ್ತು ತರಕಾರಿ ಶೀತಲೀಕರಣ ಘಟಕಗಳು ಇವುಗಳ ಸಂಖ್ಯೆಯನ್ನು ಹೆಚ್ಚಿಸಿದಲ್ಲಿ ಈ ಬೆಳೆಗಳಿಂದ ರೈತರು ಇನ್ನೂ ಹೆಚ್ಚಿನ ಲಾಭ ಪಡೆದಾರು.**

**ಸಂಪಾದಕರು: ಡಾ. ದೇವರಾಜ ಟಿ. ಎನ್.**

ಸಹ ಸಂಪಾದಕರು: ಶ್ರೀ ಬಸವನಗೌಡ ಎಂ.ಜಿ., ಶ್ರೀ ಮಲ್ಲಿಕಾರ್ಜುನ ಬಿ.ಓ., ಡಾ. ಪ್ರದೀಪ್ ಹೆಚ್ ಎಂ.
ಶ್ರೀ ಪ್ರಸನ್ನಕುಮಾರ ಎನ್., ಶ್ರೀ ರಘುರಾಜ ಜೆ., ಮತ್ತು ಡಾ. ಜಯದೇವಪ್ಪ ಜಿ.ಕೆ.,

ಪ್ರಕಾಶಕರು : ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಕದಲೀವನ, ಎಲ್.ಐ.ಸಿ. ಕಾಲೋನಿ ಲೇಔಟ್, ಬಿಐಇಟಿ ರಸ್ತೆ,
ದಾವಣಗೆರೆ–577004, ಕರ್ನಾಟಕ

ಮುದ್ರಕರು : ಅಶ್ವಿನಿ ಪ್ರಿಂಟರ್ಸ್, ದಾವಣಗೆರೆ. ಫೋ : 253341.